

**ವಿದ್ಯಾವಾರಿಧಿ, ವ್ಯಾಕರಣ ಶಾಸ್ತ್ರ ಪ್ರವೀಣ**

# ವಿದ್ವಾನ್ ಎನ್. ರಂಗನಾಥಶರ್ಮಾ

**ಶ್ರೀ ಅನಂತಶರ್ಮಾ ಭುವನಗಿರಿ**

"ಕೇಚಿದ್ ವೃಷ್ಟಿಭಿರಾರ್ದ್ರಯಂತಿ ವಸುಧಾಂ ಗರ್ಜಂತಿ ಕೇಚಿದ್‌ವೃಥಾ" ಎನ್ನುತ್ತದೆ ಸಂಸ್ಕೃತ ಸುಭಾಷಿತ. ಆಕಾಶದಲ್ಲಿ ತೋರುವ ಕೆಲವು ಮೋಡಗಳು ಕೇವಲ ಗರ್ಜಿಸಿ ವಿರಮಿಸುತ್ತವೆ. ಕೆಲವು ಮಾತ್ರ ಮಳೆ ಸುರಿಸಿ ಭೂಮಿಗೆ ತಂಪನ್ನು ಕೊಡುತ್ತವೆ. ವಿದ್ವಾಂಸರಲ್ಲಿಯೂ ಹೀಗೆ ಎರಡು ಗುಂಪುಗಳಿವೆ. ಕೆಲವರು ತಮ್ಮ ವಿದ್ಯೆಯನ್ನು ಕೇವಲ ವಾಗ್ವಾದದಲ್ಲಿ ಮಾತ್ರ ತೊಡಗಿಸುತ್ತಾ ತಾವು ವಿದ್ಯಾವಂತರೆಂದು ಪ್ರಚಾರ ಗಿಟ್ಟಿಸುವಷ್ಟರಲ್ಲಿಯೇ ತೃಪ್ತಿ ಹೊಂದುತ್ತಾರೆ. ಇನ್ನು ಕೆಲವರು ಮಾತ್ರ ಪಾಠಪ್ರವಚನ, ಗ್ರಂಥಸಂಪಾದನೆ, ರಚನೆಗಳಲ್ಲಿ ತೊಡಗಿ ಜ್ಞಾನಪ್ರವಾಹವನ್ನು ಮುಂದುವರಿಸುವ ಹರಿಕಾರರಾಗಿರುತ್ತಾರೆ. ವಿದ್ವಾನ್ ರಂಗನಾಥಶರ್ಮರು ಈ ಎರಡನೇ ಗುಂಪಿಗೆ ಸೇರಿದವರು. "ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಂ" ಎಂಬ ತೈತ್ತಿರೀಯೋಪನಿಷತ್ತಿನ ಉಪದೇಶವನ್ನೇ ತಮ್ಮ ಜೀವನದ ದಾರಿದೀಪವನ್ನಾಗಿಸಿಕೊಂಡು ೭೪ ವರ್ಷಗಳ (ಹುಟ್ಟಿದ್ದು ೭-೪-೧೯೧೬) ಸಾರ್ಥಕ ಜೀವನವನ್ನು ನಡೆಸುತ್ತಿರುವ ಶ್ರೀ ರಂಗನಾಥಶರ್ಮರದು ಸಂಸ್ಕೃತ ವಿದ್ವಾಂಸರಲ್ಲೆ ಒಂದು ವಿಶಿಷ್ಟವಾದ ವ್ಯಕ್ತಿತ್ವ.

ಗೌರವರ್ಣ, ನೀಳದೇಹ, ಪಾಂಡಿತ್ಯ ಸಹೃದಯತೆಗಳೆರಡೂ ಮೇಳವಿಸಿದಂತಿರುವ ಆಕಾರದ ಈ ವ್ಯಕ್ತಿ ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಸೊರಬದ ಸಮೀಪವಿರುವ ಪುಟ್ಟ ಊರು ನಡಹಳ್ಳಿಯಲ್ಲಿ. ಬಾಲ್ಯದಲ್ಲಿ ತಮ್ಮ ಊರಿನಲ್ಲೆ ಸಂಸ್ಕೃತ ಹಾಗೂ ವೈದಿಕಮಂತ್ರಗಳ ಅಭ್ಯಾಸ. ಆಮೇಲೆ ಉಚ್ಚಶಿಕ್ಷಣಕ್ಕಾಗಿ ಬೆಂಗಳೂರಿನ ಜಯಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಗೆ ಪ್ರವೇಶ. ಅಲ್ಲಿನ ಘನ ವಿದ್ವಾಂಸರಾದ ತಿರುನಾರಾಯಣ ಅಯ್ಯಂಗಾರ್, ಶ್ರೀಕಂಠಶಾಸ್ತ್ರಿ, ಕೃಷ್ಣಶಾಸ್ತ್ರಿ ಮುಂತಾದ ವಿದ್ವಾಂಸರಿಂದ ವ್ಯಾಕರಣ ಅಲಂಕಾರ ಶಾಸ್ತ್ರಗಳ ಅಭ್ಯಾಸ, ಎರಡೂ ಶಾಸ್ತ್ರಗಳಲ್ಲಿಯೂ ವಿದ್ವತ್ ಪದವಿ. ಸಾಲದೆಂಬಂತೆ "ಕನ್ನಡ ಪಂಡಿತ" "ಕನ್ನಡ ವಿದ್ವಾನ್" (ಮದ್ರಾಸ್ ವಿಶ್ವವಿದ್ಯಾಲಯ) ಪರೀಕ್ಷೆಗಳಲ್ಲಿ ತೇರ್ಗಡೆ, ತಾವು ಓದಿದ ಸಂಸ್ಕೃತ ಮಹಾಪಾಠಶಾಲೆಯಲ್ಲಿಯೆ ವ್ಯಾಕರಣಶಾಸ್ತ್ರ, ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸುಮಾರು ಮೂರು ದಶಕಗಳ ಕಾಲ ಬೋಧನೆ. ಇವು ಶ್ರೀಮಾನ್ ರಂಗನಾಥ ಶರ್ಮರು ನಡೆದು, ಬೆಳೆದು ಬಂದ ದಾರಿಯ ಮುಖ್ಯ ಘಟ್ಟಗಳು. ಶ್ರೀಯುತರು ತಮ್ಮ ಉಪಾಧ್ಯಾಯ ವೃತ್ತಿಯಲ್ಲಿ ಅನೇಕ ಶಿಷ್ಯರಿಗೆ ಮಾರ್ಗದರ್ಶನ ಮಾಡಿ ಅವರನ್ನು ವಿದ್ವಾಂಸರನ್ನಾಗಿ ಮಾಡಿದರು. ಇಷ್ಟೇ ಆಗಿದ್ದಲ್ಲಿ ಎಲ್ಲ ಸಂಸ್ಕೃತ ವಿದ್ವಾಂಸರಂತೆ ಶರ್ಮರೂ ಒಬ್ಬರಾಗಿ "ಒಬ್ಬ ಒಳ್ಳೆಯ ಅಧ್ಯಾಪಕರು" ಎಂದು ಮಾತ್ರ ಹೇಳಿಸಿಕೊಂಡು ನಿವೃತ್ತರಾಗುತ್ತಿದ್ದರೇನೊ ! ಆದರೆ ಅವರು ಕೊಠಡಿಯೊಳಗಿನ ಉಪಾಧ್ಯಾಯರು ಮಾತ್ರವಾಗದೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಸಂಸ್ಕೃತ-ಕನ್ನಡ ಭಾಷೆಗಳ ಸೇವೆಗೆ ತಮ್ಮನ್ನು ತೊಡಗಿಸಿದರು. ಕೆಲವು ವಿಷಯಗಳಲ್ಲಿಯಂತೂ ಅವರದೇ ಕೊನೆಯ ವಾಕ್ಯ ಎನ್ನುವಷ್ಟು ಪಾಂಡಿತ್ಯಪ್ರಬುದ್ಧತೆಗಳನ್ನು ಸಂಪಾದಿಸಿದರು. ಇವರ ವಿದ್ವತ್ತು ಪ್ರತಿಭೆಗಳನ್ನರಿತ ಕೆಲವು ಮಠಾಧಿಪತಿಗಳೂ ರಾಮಕೃಷ್ಣಾಶ್ರಮದ ಯತಿಗಳೂ ಇವರಿಂದ ಪಾಠ ಹೇಳಿಸಿಕೊಂಡಿದ್ದಿದೆ. ಜಾತಿಮತಗಳ ಸಂಕುಚಿತ ಭಾವನೆಯಿಲ್ಲದೆ ಕೇವಲ ಶಾಸ್ತ್ರ ನಿಷ್ಠೆಯಿಂದ ತಮ್ಮಲ್ಲಿರುವ ವಿದ್ಯೆಯನ್ನು ಪದೇಶಿಸಿ ಶಾಸ್ತ್ರ ಪ್ರಚಾರ ಕಾರ್ಯವನ್ನು ಕೈಗೊಂಡ ವಿದ್ವಾಂಸರಿವರು.

ಶ್ರೀ ರಂಗನಾಥ ಶರ್ಮರು ಉಭಯ ಭಾಷಾ ವಿದ್ವಾಂಸರು. ಹಳಗನ್ನಡದಲ್ಲಿಯೂ ಆಳವಾದ ಪರಿಜ್ಞಾನವುಳ್ಳವರು. ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ. ನಾರಾಯಣರವರು ಹಳಗನ್ನಡ ಕಾವ್ಯಗಳನ್ನು ಹೊಸಗನ್ನಡಕ್ಕೆ ಅನುವಾದಿಸಿ ಪ್ರಕಟಿಸುವ ಯೋಜನೆಯೊಂದನ್ನು ಕೈಗೊಂಡಿದ್ದರು. ಆಗ ರಚನೆಗೊಂಡ ಅನುವಾದಕ ಮಂಡಳಿಗೆ ರಂಗನಾಥಶರ್ಮರೇ ಅಧ್ಯಕ್ಷರಾಗಿ ಆಯ್ಕೆಯಾದರು. ಇದರಿಂದ ಶ್ರೀಯುತ ಶರ್ಮರ ಕನ್ನಡ ಭಾಷಾ ಪಾಂಡಿತ್ಯ ಹಾಗೂ ಭಾಷಾ ಶೈಲಿಯ ಬಗ್ಗೆ ಇತರ ವಿದ್ವಾಂಸರಿಗಿರುವ ವಿಶ್ವಾಸ ಸ್ಪಷ್ಟವಾಗುತ್ತದೆ. ಶರ್ಮರು ಈ ಯೋಜನೆಯಡಿ ಹದಿಮೂರು ಗ್ರಂಥಗಳನ್ನು ಸಂಪಾದಿಸಿದ್ದಲ್ಲದೆ ಅನೇಕ ಗ್ರಂಥಗಳ ಅನುವಾದಕ್ಕೆ ಮಾರ್ಗದರ್ಶಿಗಳಾದರು.

ರಂಗನಾಥ ಶರ್ಮರ ತಲಸ್ಪರ್ಶಿ ಪಾಂಡಿತ್ಯವೇ ಅವರನ್ನು ಅನೇಕರ ಪ್ರೀತ್ಯಾದರಗಳಿಗೆ ಪಾತ್ರರನ್ನಾಗಿ ಮಾಡಿತು. ಇದೇ ಕಾರಣದಿಂದಾಗಿಯೇ ಅವರು ಕರ್ಣಾಟಕದ ಮಹಾವ್ಯಕ್ತಿ ಡಿವಿಜಿಯವರ ದೃಷ್ಟಿಗೆ ಬಿದ್ದರು. ಡಿವಿಜಿಯವರದು ಸುವರ್ಣಕಾಂತ ವ್ಯಕ್ತಿತ್ವ. ಉತ್ತಮ ವಸ್ತು ಎಲ್ಲೇ ಇದ್ದರೂ ಅದನ್ನು ಪತ್ತೆ ಹಚ್ಚುವ ಹಾಗೂ ಅದು ಸದುಪಯೋಗಿಯಾಗುವಂತೆ ಮಾರ್ಗದರ್ಶನ ಮಾಡುವ ಗುಣವುಳ್ಳ ಅವರು ಶ್ರೀ ಶರ್ಮರಲ್ಲಿ ಒಬ್ಬ ಸುಜನ ಶೀಲ ವಿದ್ವಾಂಸರನ್ನು ಕಂಡರು. ಆಮೇಲೆ ಅವರನ್ನು ತುಂಬಾ ಹಚ್ಚಿಕೊಂಡ ಡಿವಿಜಿಯವರು ಶರ್ಮರ ಮೂಲಕ ಶ್ರೀಮದ್ ರಾಮಾಯಣವನ್ನು ಕನ್ನಡದಲ್ಲಿ ಅನುವಾದ ಮಾಡಿಸಿದರು. ಗೋಖಲೆ ಸಾರ್ವಜನಿಕ ಸಂಸ್ಥೆಯ ವ್ಯಾಸಂಗ ಗೋಷ್ಠಿಗೆ ಶರ್ಮರನ್ನು ಬರಮಾಡಿಕೊಂಡು ಅವರಿಂದ ಅನೇಕ ಭಾಷಣಗಳನ್ನು ಮಾಡಿಸಿದರು. ಇದರಿಂದಾಗಿ ಶರ್ಮರ ವಿದ್ವತ್ತು ಹತ್ತು ಜನಕ್ಕೆ ತಿಳಿಯುವಂತಾದುದಲ್ಲದೆ ಸ್ವತಃ ಶರ್ಮರಿಗೂ ತಮ್ಮ ಅಭ್ಯಾಸದ ಆಳವನ್ನು ಹೆಚ್ಚಿಸುವುದಕ್ಕೆ ಪ್ರೇರಣೆಯಾಯಿತು. ಡಿವಿಜಿಯಂತಹ ವ್ಯಕ್ತಿಗಳಿಂದ ಪಡೆದ ಮೆಚ್ಚುಗೆ ಸ್ವಾಭಾವಿಕವಾಗಿಯೆ ಅವರ ಆತ್ಮ ವಿಶ್ವಾಸವನ್ನು ಹೆಚ್ಚಿಸಿ ಇನ್ನೂ ಅನೇಕ ಗ್ರಂಥಗಳು ಅವರಿಂದ ಹೊರಬರುವದಕ್ಕೆ ಕಾರಣವಾಯಿತು. ಮುಂದೆ ಇವರು ಭಾಗವತದ ದಶಮಸ್ಕಂಧವನ್ನು ಅನುವಾದಿಸಿದರು. ಇತ್ತೀಚೆಗೆ ಹನ್ನೊಂದು, ಹನ್ನೆರಡನೆಯ ಸ್ಕಂಧಗಳೂ ಅನುವಾದಗೊಂಡಿವೆ.

ಇವರ ರಾಮಾಯಣದ ಅನುವಾದವನ್ನು ನೋಡಿ ಮೆಚ್ಚಿಕೊಂಡ ರಾಮಕೃಷ್ಣಾಶ್ರಮದವರು ತಮ್ಮ ಪ್ರಕಾಶನ ಸಂಸ್ಥೆಗೆ ಇವರನ್ನು ಆಹ್ವಾನಿಸಿ ವಿಷ್ಣು ಪುರಾಣದ ಕನ್ನಡ ಅನುವಾದವನ್ನು ಇವರಿಂದ ಬರೆಸಿ ಪ್ರಕಟಿಸಿದರು. ಸಾಮಾನ್ಯವಾಗಿ ಹೊರಗಿನ ವಿದ್ವಾಂಸರನ್ನು ಇಂತಹ ಕೆಲಸಕ್ಕೆ ಸೇರಿಸಿಕೊಳ್ಳದ ರಾಮಕೃಷ್ಣಾಶ್ರಮದವರು ಶ್ರೀ ಶರ್ಮರನ್ನು ಆಹ್ವಾನಿಸಿದ್ದು ಇವರ ಪಾಂಡಿತ್ಯ ಹಾಗೂ ಪ್ರಾಮಾಣಿಕತೆಯನ್ನು ಆಶ್ರಮದವರು ಮೆಚ್ಚಿಕೊಂಡಿದ್ದರ ದ್ಯೋತಕ.

ಶ್ರೀ ರಂಗನಾಥ ಶರ್ಮರು ಉಭಯ ಭಾಷಾ ಪ್ರವೀಣರು. ಸಂಸ್ಕೃತ ಮಾತ್ರವಲ್ಲದೆ ಕನ್ನಡಭಾಷಾ ಕ್ಷೇತ್ರದಲ್ಲೂ ಇವರ ವ್ಯವಸಾಯ ಸಾಗಿದೆ. "ಹೊಸಗನ್ನಡ ವ್ಯಾಕರಣ" ಎಂಬ ಗ್ರಂಥವನ್ನು ಬರೆದು ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟಿಸಿದ್ದಾರೆ. ಇವುಗಳಲ್ಲದೆ ಇನ್ನೂ ಅನೇಕ ಗ್ರಂಥಗಳು ಶರ್ಮರಿಂದ ಬರೆದು ಪ್ರಕಟಿಸಲ್ಪಟ್ಟಿವೆ. "ಲೌಕಿಕ ನ್ಯಾಯಗಳು" "ಸಂದರ್ಭ ಸೂಕ್ತಿ". "ಅಮರ ಕೋಶದ ಕನ್ನಡ ಅನುವಾದ", "ಶ್ರೀರಾಮಚಂದ್ರ", "ವಾಲ್ಮೀಕಿ ಮುನಿಗಳ ಹಾಸ್ಯ ಪ್ರವೃತ್ತಿ" ಮುಂತಾದವು ಅವರ ಕೆಲವು ಕೃತಿಗಳು. ಡಿವಿಜಿಯವರ "ಮರುಳ ಮುನಿಯನ ಕಗ್ಗ" ಶರ್ಮರು ಸಂಪಾದಿಸಿದ ಒಂದು ಕೃತಿ ರತ್ನ. ಇದಲ್ಲದೆ ಭಾರತ-ಭಾರತಿ

ಪುಸ್ತಕ ಸಂಪದ ಮಾಲೆಗಾಗಿಯೂ ಆರು ಪುಸ್ತಕಗಳನ್ನು ಬರೆದಿದ್ದಾರೆ.

ಬಹುಮುಖ ಪ್ರತಿಭೆಯುಳ್ಳ ಶರ್ಮರು ಕಾವ್ಯಕ್ಷೇತ್ರದಲ್ಲೂ ಕೃಷಿ ಮಾಡಿದ್ದಾರೆ. ಸುಬ್ರಹ್ಮಣ್ಯ, ಗೋಮಟೇಶ್ವರ, ಶ್ರೀರಾಮ ಮುಂತಾದ ದೇವತೆಗಳನ್ನು ಕುರಿತು ಸುಪ್ರಭಾತಗಳನ್ನು ರಚಿಸಿದ್ದಾರೆ. "ಬಾಹುಬಲಿ ವಿಜಯಂ" "ಏಕಚಕ್ರಂ" ಇವರು ಬರೆದ ಸಂಸ್ಕೃತ ನಾಟಕಗಳು. ಅಂತ್ಯಾಕ್ಷರಿ, ಸಮಸ್ಯಾಪೂರಣಂ, ಆಶುಕವಿತಾರಚನೆಗಳಲ್ಲಿ ವಿಶೇಷ ಆಸಕ್ತಿಯುಳ್ಳ ಇವರು ೧೯೪೪ರಲ್ಲಿ ಆಕಾಶವಾಣಿಯ ಸರ್ವಭಾಷಾ ಕವಿ ಸಮ್ಮೇಳನದಲ್ಲಿ ಸಂಸ್ಕೃತವನ್ನು ಪ್ರತಿನಿಧಿಸಿದ್ದರು.

ಶ್ರೀ ಶರ್ಮರು ಸರಳಸ್ವಭಾವದ ಸಜ್ಜನರು. ಯಾರ ಮನಸ್ಸನ್ನೂ ನೋಯಿಸಿದ ಮೃದುಸ್ವಭಾವ ಅವರದು. ಆದರೆ ತಮ್ಮ ಸ್ವಾಭಿಮಾನಕ್ಕೆ, ತಾವು ನಂಬಿದ ತತ್ವಕ್ಕೆ ಧಕ್ಕೆ ಬಂದಾಗ ಅದನ್ನು ಸಹಿಸುವವರಲ್ಲ. ಈ ಕಾರಣದಿಂದಲೆ ಅವರು ಕನ್ನಡ ಸಾಹಿತ್ಯ ಪರಿಷತ್ತನ್ನು ಬಿಡಬೇಕಾಯಿತು. ಜಿ. ನಾರಾಯಣರವರು ಅಧ್ಯಕ್ಷಸ್ಥಾನದಿಂದ ನಿವೃತ್ತರಾದ ಮೇಲೆ ಪರಿಷತ್ತಿನ ಅಧಿಕಾರಿವರ್ಗದವರ ಮನೋಭಾವದಲ್ಲಿ ಬದಲಾವಣೆಯುಂಟಾಯಿತು. ಸಂಸ್ಕೃತ ದ್ವೇಷವೊಂದೆ ಕನ್ನಡವನ್ನು ಉಳಿಸಬಲ್ಲದು ಎಂಬ ಭ್ರಮೆಗೆ ಅವರು ಒಳಗಾದಂತೆ ತೋರಿತು. ಇದರಿಂದಾಗಿ ಅವರು ಸಂಸ್ಕೃತವನ್ನು ಕುರಿತು ಮನಬಂದಂತೆ ಆಡತೊಡಗಿದರು. ಸಂಸ್ಕೃತ ಕನ್ನಡಗಳೆರಡನ್ನೂ ಸಮನಾಗಿ ಪ್ರೀತಿಸಿದ ಶರ್ಮರ ಮನಸ್ಸು ಇದರಿಂದ ನೊಂದಿತು. ಕೂಡಲೆ ಇವರು ಅನುವಾದಕಮಂಡಲಿಯ ಅಧ್ಯಕ್ಷಸ್ಥಾನವನ್ನು ತ್ಯಜಿಸಿದರು. ಆದರೆ ಕನ್ನಡದ ಕೈಂಕರ್ಯವನ್ನು ತ್ಯಜಿಸಲಿಲ್ಲ. ಸಂಸ್ಕೃತ ವಿದ್ವಾಂಸರು ಕನ್ನಡವನ್ನು ಹೇಗೆ ಬೆಳೆಸಬಲ್ಲರು ಎಂಬುದನ್ನು ತಮ್ಮ ಕಾರ್ಯದ ಮೂಲಕ ತೋರಿಸಿಕೊಟ್ಟು ಆ ಸಂಸ್ಕೃತ ದ್ವೇಷಿಗಳಿಗೆ ಉತ್ತರ ನೀಡಿದರು.

ಸಾಮಾನ್ಯವಾಗಿ "ಸಂಸ್ಕೃತ ವಿದ್ವಾಂಸರು ಕೂಪಮಂಡೂಕದಂತೆ. ತಮ್ಮ ಶಾಸ್ತ್ರವೊಂದನ್ನು ಬಿಟ್ಟು ಬೇರೆ ವಿಷಯದ ಗಂಧವೇ ಅವರಿಗಿರುವುದಿಲ್ಲ. ತಾವು ಅಭ್ಯಾಸ ಮಾಡಿದ ಶಾಸ್ತ್ರವನ್ನೂ ಸಹ ವೈಜ್ಞಾನಿಕವಾಗಿ ಸಾಮಾನ್ಯ ಜನರಿಗೆ ಅರ್ಥವಾಗುವಂತೆ ವಿಶ್ಲೇಷಿಸಲು, ವಿವರಿಸಲು ಅವರಿಗೆ ಬಾರದು" ಎಂದು ಮುಂತಾಗಿ ಸಂಸ್ಕೃತ ವಿದ್ವಾಂಸರ ಬಗ್ಗೆ ಅನೇಕ ಅಪಖ್ಯಾತಿಗಳಿವೆ. ಈ ಮಾತಿಗೆ ಉದಾಹರಣೆಗಳೂ ಸಾಕಷ್ಟು ಇಲ್ಲದಿಲ್ಲ. ಆದರೆ ಇದಕ್ಕೆ ಅಪವಾದವಾಗಿ ನಿಂತವರು ಶ್ರೀ ಶರ್ಮರು. ಇವರು ಓದಿದ್ದು ವ್ಯಾಕರಣದಂತಹ ನೀರಸ ಶಾಸ್ತ್ರವಾದರೂ ಅದನ್ನು ಸಂಸ್ಕೃತ ಕನ್ನಡ ಭಾಷೆಗಳ ಸೇವೆಗಾಗಿ ಉಪಯೋಗಿಸಿಕೊಂಡಿದ್ದು ಇವರ ಕರ್ತೃತ್ವಕ್ಕೆ ಸಾಕ್ಷಿ. ಇವರು ಸುಮಾರು ೧೯೬೬–೬೭ರಲ್ಲಿ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಸಂಸ್ಕೃತ ವ್ಯಾಕರಣ ಶಾಸ್ತ್ರವನ್ನು ಕುರಿತು ಹತ್ತು ಉಪನ್ಯಾಸಗಳನ್ನು ಇತ್ತರು. ಸಭಾಸದರಿಗೆ ಅರ್ಥವಾಗುವಂತೆ, ಆಸಕ್ತಿ ಕೆರಳುವಂತೆ ತಿಳಿಗನ್ನಡದಲ್ಲಿ ನೀರಸವೆಂದು ನಂಬಲ್ಪಟ್ಟ ಆ ಶಾಸ್ತ್ರದ ಬಗ್ಗೆ ಹತ್ತು ದಿನಗಳ ಕಾಲ ಉಪನ್ಯಾಸ ಮಾಡಿದ್ದು ಒಂದು ಅದ್ಭುತ ವಿಷಯವೇ ಸರಿ. ಇಷ್ಟೇ ಅಲ್ಲ. "ಮಂಕುತಿಮ್ಮನ ಕಗ್ಗ" "ಮರುಳ ಮುನಿಯನ ಕಗ್ಗ" ಇವುಗಳ ಬಗ್ಗೆ ಇವರು ಮಾಡಿದ ಭಾಷಣಗಳು ಬರೆದ ಲೇಖನಗಳು ಇವರೆಂತಹ ವಿಚಾರಶೀಲರು, ವಿಶಾಲ ಮನೋಭಾವದವರು ಎಂಬುದನ್ನು ತೋರಿಸುತ್ತವೆ. ಡಿವಿಜಿಯವರ ಮೇರು ಕೃತಿಗಳಾದ ಈ ಎರಡು ಗ್ರಂಥಗಳ ಬಗ್ಗೆ ಇಂದಿಗೂ ಸಹ ಅಧಿಕಾರವಾಣಿಯಿಂದ ವ್ಯಾಖ್ಯಾನ ನೀಡಬಲ್ಲವರು ಶ್ರೀ ಶರ್ಮರೊಬ್ಬರೇ ಎಂದರೆ ಅತಿಶಯೋಕ್ತಿಯಾಗಲಾರದೇನೋ !

ಇಂಥ ವಿದ್ವಾಂಸರನ್ನು ಅನೇಕ ಸನ್ಮಾನ ಪ್ರಶಸ್ತಿಗಳು ತಾವಾಗಿಯೆ ಹುಡುಕಿಕೊಂಡು ಬಂದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ೧೯೭೪ರಲ್ಲಿ ರಾಜ್ಯ ಸರ್ಕಾರದಿಂದ ಶ್ರೇಷ್ಠ ವಿದ್ವಾಂಸ ಪ್ರಶಸ್ತಿ. ೧೯೭೫ರಲ್ಲಿ ಕೇಂದ್ರ ಸರ್ಕಾರದಿಂದ ಶ್ರೇಷ್ಠ ಸಂಸ್ಕೃತ ಶಿಕ್ಷಕ ಪ್ರಶಸ್ತಿ, ೧೯೬೮ರಲ್ಲಿ ಸೋಸಲೆ ಸ್ವಾಮೀಜಿಯವರಿಂದ "ವಿದ್ಯಾವಾರಿಧಿ" ಎಂಬ ಬಿರುದು ೧೯೭೮ರಲ್ಲಿ ಕಂಚಿ ಶಂಕರಾಚಾರ್ಯ ಸುಜಯೀಂದ್ರ ತೀರ್ಥರಿಂದ "ವ್ಯಾಕರಣ ಶಾಸ್ತ್ರ ಪ್ರವೀಣ" ಎಂಬ ಬಿರುದು, ಇವೇ ಮುಂತಾದವು ಶರ್ಮರವಿದ್ವತ್ತನ್ನು ಗುರುತಿಸಿ ಸಂದ ಗೌರವಗಳು. ೧೯೮೪ರಲ್ಲಿ ಆದಿಚುಂಚನಗಿರಿಯಲ್ಲಿ ನಡೆದ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ತಿನ ೫ನೇ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಇವರು ಅಲಂಕರಿಸಿದ್ದರು. ಅಂದು ಶ್ರೀಯುತರು ಮಾಡಿದ ಭಾಷಣ ಸಂಸ್ಕೃತ ಪ್ರೇಮಿಗಳೆಲ್ಲ ಸದಾ ನೆನಪಿನಲ್ಲಿಟ್ಟು



ಕೊಳ್ಳಬೇಕಾದದ್ದು. ಕೆಲವು ವರ್ಷಗಳ ಹಿಂದೆ ಸಾಗರದ ಪೌರರು ಅವರನ್ನು ವಿಶೇಷ ರೀತಿಯಲ್ಲಿ ಸನ್ಮಾನಿಸಿದರು. ಶರ್ಮರನ್ನು ಗೌರವಿಸುವದೆಂದರೆ ಸಂಸ್ಕೃತವನ್ನು ಗೌರವಿಸಿದಂತೆ. ಆದ್ದರಿಂದ ಕನ್ನಡನಾಡಿನ ವಿದ್ವಾಂಸರು ಒಂದು ಸಂಭಾವನಾ ಗ್ರಂಥವನ್ನು ಅರ್ಪಿಸುವದರ ಮೂಲಕ ಅವರನ್ನು ಸನ್ಮಾನಿಸಿದಲ್ಲಿ ಶರ್ಮರ ವಿದ್ವತ್ತು, ಸಾಧನೆಗಳನ್ನು ಸ್ವಲ್ಪವಾದರೂ ಗುರುತಿಸಿದಂತಾದೀತು.

೭೪ ವಸಂತಗಳನ್ನು ದಾಟಿದ ರಂಗನಾಥ ಶರ್ಮರು ಇಂದಿಗೂ ಸಹ ತರುಣರು ನಾಚುವಂತೆ ಸಂಸ್ಕೃತ ಕಾರ್ಯಕ್ಕಾಗಿ ದುಡಿಯುತ್ತಿದ್ದಾರೆ. ವೃದ್ಧಾಪ್ಯ ಅವರ ಶರೀರದ ಮೇಲೆ ಧಾಳಿ ನಡೆಸಿದ್ದರೂ ಚೈತನ್ಯ ಕುಗ್ಗಿಲ್ಲ. ಅಧ್ಯಯನ, ಗ್ರಂಥರಚನೆಗಳಲ್ಲಿ ಆಸಕ್ತಿ ಕಡಿಮೆಯಾಗಿಲ್ಲ. "ಯಸ್ತು ಕ್ರಿಯಾವಾನ್ ಪುರುಷಃ ಸ ವಿದ್ವಾನ್" ಎಂಬುದನ್ನು ತಮ್ಮ ನಡೆನುಡಿಗಳ ಮೂಲಕ ಸಮರ್ಥಿಸುತ್ತಿರುವ ಶ್ರೀ ಶರ್ಮರನ್ನು ನೋಡುವುದೇ ಒಂದು ಸಂತೋಷದ ವಿಷಯ. ಅವರೊಡನೆ ಮಾತನಾಡುವುದೇ ಒಂದು ಸಂತೋಷದ ವಿಷಯ. ಒಂದು ಆನಂದ ದಾಯಕ ಅನುಭವ.